SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸ್ಪಿರಿಸ್ಟ್ರೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 155] ಶುಕ್ರವಾರ 22—2—46 [ಬಿಡಿ ಪ್ರತಿ 3 ಪೈ

ಪತ್ರಿಕೋದ್ಯೋಗಿ ಸಂಘ

ನಿನ್ನೆಯ ದಿವಸ ಸಂಜೆ ಮೈಸೂರು ನಗರದ ಪತ್ರಿಕೋದ್ಯೋಗಿ ಸಂಘದಲ್ಲಿ ಶ್ರೀ ಅಗಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ 'ಆಹಾರ ಪರಿಸ್ಥಿತಿ' ಯನ್ನು ಪರಿಶೀಲಿಸುವ ಸಲುವಾಗಿ ವಿಶೇಷ ಸಭೆ ಸೇರಿದ್ದಿತು.

'ನಮ್ಮ ಸಂಘದ ಕಾಮಾನಿನ ಪ್ರಕಾರ ನಾವು ಇತರ ವಿಷಯಗಳಿಗೆ ಗಮನವೀಯಕೂಡದು' ಎಂಬುದಾಗಿ ಶ್ರೀ ಆರ್. ಎಸ್. ನಾರಾಯಣ್ ಕ್ರಿಯಾಲೋಪ ತಂದರು.

ಶ್ರೀ ಟಿ. ನಾರಾಯಣರು ಈ ಕ್ರಿಯಾಲೋಪವನ್ನು ಪುಸ್ಕೀಕರಿಸುತ್ತಾ, ಸಂಘ ಸ್ಥಾಪನೆಯಾದಾಗ ನಮಗೆ ಸಂಬಂಧಿಸದ ಬೇರೊಂದು ನಿರ್ಣಯದ ಪ್ರಸಂಗದಲ್ಲಿ ಕಾರ್ಯದರ್ಶಿಯಾಗಿ ದ ಶ್ರೀ ಕೆ ಜೀವಣ್ಣರಾಯರು ರಾಜಿನಾಮೆ ಕೊಡಬೇಕಾಯಿತು ಎಂಬುದಾಗಿ ತಿಳಿಸಿ, ಇಂತಹ ಸಭೆಗಳಿಗೆ ಬಂದೇತೀರಬೇಕೆಂಬ ಕಡ್ಡಾಯವೇನಾದರು ಆದರೆ ನಾನು ರಾಜೀನಾಮೆ ಕೊಡುತ್ತೇನೆಂದು ತಿಳಿಸಿದರು.

ಶ್ರೀ ಕೆ. ಅನಂತಸುಬ್ಬರಾಯರು ಮತ್ತು ಶ್ರೀ ಕೆ. ಗೋಪಾಲಕೃಷ್ಣರಾಯರು ಹಾಲಿ ಆಹಾರ ಪರಿಸ್ಥಿತಿಯನ್ನು ವಿವರಿಸಿದರು. ಈ ವಿವರಗಳನ್ನೆಲ್ಲಾ ಸರ್ಕಾರಕ್ಕೆ ವರದಿ ಮಾಡುವ ಸಲುವಾಗಿ ಶ್ರೀ ಅಗರಂ ರಂಗಯ್ಯನವರು, ಶ್ರೀ ಕೆ. ಅನಂತಸುಬ್ಬರಾಯರು ಮತ್ತು ಶ್ರೀ ಕೆ. ಗೋಪಾಲಕೃಷ್ಣರಾಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಯಿತು.

ಆಹಾರ ಪರಿಸ್ಥಿತಿಯಲ್ಲಿ ನೊಂದ ಸದಸ್ಯರುಗಳ ಕಷ್ಟ ನಿವಾರಣೆಗಾಗಿ ರೂ. 250 ನ್ನು ಹಂಚಬೇಕೆಂದು ಶ್ರೀ ಆರ್ ಎಸ್. ನಾರಾಯಣರು ತಂದ ನಿರ್ಣಯದ ಮೇಲೆ, ಎರಡು ತಿದ್ದುಪಡಿಗಳಾಗಿ, ಸದಸ್ಯರುಗಳಿಗೆ ಸಾಲಕೊಡುವ ಏರ್ಪಾಡು ಮಾಡಬೇಕೆಂದೂ, ಅದಕ್ಕಾಗಿ ರೂ 500 ನ್ನು ಇಡಬೇಕೆಂದೂ ತೀರ್ಮಾನವಾಯಿತು. ಶ್ರೀಮತಿ ಲಕ್ಷ್ಮಮ್ಮ, ಶ್ರೀಗಳಾದ ಗೋಪಾಲಕೃಷ್ಣರಾವ್ ಜೋಯಿಸ್, ಸ್ವಾಮಿ, ನಾಧವರಾವ್ ಮತ್ತು ಅಗಂ ರಂಗಸ್ವಾಮಿಯವರುಗಳನ್ನೊಳಗೊಂಡ ಸಮಿತಿ ರಚಿಸಲಾಯಿತು.

ಪಾಕೇಸ್ಥಾನ ಯಾವಾಗ?

ಪಾಕೇಸ್ಥಾನದ ಸಮಸ್ಯೆ ಇತ್ಯರ್ಥದ ಬಗ್ಗೆ ಕಾರ್ಯಕ್ರಮವಾದನಂತರವೇ ಭಾರತದ ಸ್ವಾತಂತ್ರ್ಯ ಪ್ರಶ್ನೆ ಎಂಬುದಾಗಿ ಎ ॥ ಜಿನ್ನಾರವರು ಭಾರತಕ್ಕೆ ಬ್ರಿಟಿಷ್ ಮಂತ್ರಿಮಂಡಲ ನಿಯೋಗದ ಆಗಮನ ಬಗ್ಗೆ ಹೇಳಿಕೆಯಿತ್ತಿರುವರು.

ಬೊಂಬಾಯಿನಲ್ಲಿ ಗೋಳಿಬಾರ್

ಮಹಾರುದ್ರಹೋಮಸಮಿತಿ

ನಂಜನಗೂಡು, ತಾ. 22

ಭಕ್ತ ಮಹಾಶಯರಲ್ಲಿ ವಿನಂತಿ —

ಮಹಾರುದ್ರಹೋಮ 20 ನೆ ತಾರೀಖು ಪೂರ್ಣಾಹುತಿಯೊಡನೆ ಮುಕ್ತಾಯವಾಯಿತು. ಅನೇಕ ಸಹಸ್ರ ಜನಗಳಿಗೆ ಎಲ್ಲಾ ಕೋವಿನವರಿಗೂ ಊಟದ ಏರ್ಪಾಡು ಈ ಹಸ್ಸೊಂದು ದಿನಗಳೂ ನಡೆದವು. ಋತ್ವಿಜರು ವಿದ್ವಾಂಸರು ಮತ್ತು ಇತರರಿಗೆ ಎಲ್ಲಾ ಸಂಭಾವನೆಗಳೂ ಸಲ್ಲಿಸಿದ್ದಾಯಿತು. ಈ ಮಹತ್ಕಾರ್ಯಕ್ಕೆ ಈ ಸ್ಥಳದ ಮತ್ತು ಮೈಸೂರು ಮತ್ತು ಇತರ ಸ್ಥಳಗಳ ಭಕ್ತ ಮಹಾಶಯರುಗಳು ಉದಾರವಾಗಿ ಸಹಾಯ ಮಾಡಿದ್ದರಿಂದಲೂ ಈ ಸ್ಥಳದ ಸಮಸ್ತ ಜನರೂ ಭೇದಭಾವಗಳನ್ನಿಡದೆ ಸ್ವಾರ್ಥತ್ಯಾಗದಿಂದಲೂ ಶ್ರದ್ಧೆಯಿಂದಲೂ ಹಗಲೂರಾತ್ರಿ ಕಷ್ಟಪಟ್ಟು ಕೆಲಸ ಮಾಡಿದ್ದರಿಂದಲೂ ಯಶಸ್ವಿಯಾಗಿ ನಡೆಯಲು ಅವಕಾಶವಾಯಿತು. ಪತ್ರಿಕೋದ್ಯೋಗಿಗಳು ವಿಶಾಲ ಹೃದಯದಿಂದ ಪ್ರಕಟಣಾ ಕಾರ್ಯವನ್ನು ನೆರವೇರಿಸಿದರು. ದ್ರವ್ಯ ಸಹಾಯ ಮಾಡಿದ ಮತ್ತು ಕಷ್ಟಪಟ್ಟು ಕೆಲಸ ಮಾಡಿರುವ ಎಲ್ಲರ ಹೆಸರುಗಳನ್ನು ಬರೆಯುವುದು ಅತ್ಯಾವಶ್ಯಕವಾದರೂ ಪ್ರಕಟಣೆಗೆ ವಿಶೇಷ ಸ್ಥಳ ದೊರೆಯುವುದು ಸಾಧ್ಯವಿಲ್ಲದುದರಿಂದ ಸಮಸ್ತ ಮಹಾಶಯರಿಗೂ ಸಮಿತಿ ಅಧ್ಯಕ್ಷರಾದ ಬಿ. ವಿ ಪಂಡಿತರು ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸಿ ಶಿವಾರ್ಪಣ ಕೃತಜ್ಞತೆಯನ್ನು ಸೂಚಿಸಿರುತ್ತಾರೆ. ಮುಂದಿನವಾರ ಭಕ್ತ ಮಹಾಶಯರಿಗೆ ರುದ್ರಹೋಮ ಸವಗ್ರಹ ಹೋಮಾದಿ ಪ್ರಸಾದವು ಪರಸ್ಥಳಗಳಿಗೆ ಟಪ್ಪಾಲ್ ಮೂಲಕ ಕಳುಹಿಸಲ್ಪಡುವುದಾಗಿ ತಿಳಿಸುತ್ತಾರೆ.

ಲಂಡನ್, ಫೆ 20 — ಪ್ರಪಂಚದ ಪುನರ್ನಿರ್ಮಾವಸ್ಥೆ ಮತ್ತು ಅಭಿವೃದ್ಧಿಗಾಗಿ ಸ್ಥಾಪಿಸಬೇಕೆಂದಿರುವರು. ಅಂತರರಾಷ್ಟ್ರೀಯ ಆರ್ಥಿಕ ನಿಧಿಗೆ ಬ್ರಿಟಿಷ್ ಅರ್ಥ ಶಾಸ್ತ್ರಪ್ರವೀಣ ಲಾರ್ಡ್ ಕೇಯಿನಿಸರು ನೇಮಿಸಲ್ಪಟ್ಟರು.

ಗಾಂಧೀಜಿಯವರು ಪೂನಾದಲ್ಲಿ ಅರುಣ ಅಸಫಾಲಿಯೊಡನೆ ತೊಂಭತ್ತು ನಿಮಿಷಗಳ ಕಾಲ ಮಾತುಕತೆ ನಡೆಸಿದರು.

ಕ್ಯಾ ॥ ಅಬ್ದುಲ್ ರಷೀದಿಗೆ ವಿಧಿಸಿರುವ ಶಿಕ್ಷೆಯನ್ನು ಪ್ರತಿಭಟಿಸಲು ಕೊರಂಗಾಭಾದಿನಲ್ಲಿ ಹಿಂದುಗಳು ಮುಸ್ಲಿಂರು ಪೂರ್ಣ ಹರತಾಳ ನಡೆಸಿದರು.

ಹರ್ಫಡ್ಡಗ ಕಲ್ಲಿಜ್ಜಲು ಗಣಿಯಲ್ಲಾದ ಸ್ಫೋಟದ ಪರಿಣಾಮವಾಗಿ ಅಲ್ಲಿದ್ದ 550 ಜನರು ಇಬ್ಬರು ಬ್ರಿಟಿಷ್ ಅಧಿಕಾರಿಗಳು ಜೋನಿನಲ್ಲಿ ಬಿದ್ದಂತಿರುವರು.

ವಂದಿನ ತಿಂಗಳು ಅಗಾಖಾನರು ಕರಾಚಿಗೆ ಭೇಟಿ ಕೊಡುವ ಸಂದರ್ಭದಲ್ಲಿ ನಗರಸಭೆ ಅವರಿಗೆ ಮಾನಪತ್ರವನ್ನು ಸಮರ್ಪಿಸುವುದು.

ಜ ॥ ಫ್ರಾಂಕೋ ಮೂರ್ · ಸೇನೆಗಳನ್ನು ಜಮಾಯಿಸುತ್ತಿರುವನೆಂದು ಪ್ರಕಟವಾಗಿದೆ. ಸೈನಿಗೆ ರಾಜರನ್ನು ತರುವ ಪ್ರಯತ್ನ ತಪ್ಪಿತೇ?

ಬೊಂಬಾಯಿ ನೌಕಾದಳದವರು ಮುಷ್ಕರ ಪ್ರಾರಂಭಿಸಿದ್ದು ನಿನ್ನೆ ಪ್ರಕಟಿಸಲಾಗಿತ್ತಷ್ಟೆ. ಅನೇಕರ ದನ್ಮಗಿರಿ ಮಾಡಲುಸಿಕ್ಕಿದಿದ್ದಕ್ಕಾಗಿ ಪೋಲಿಸರು ಅವರನ್ನು ಅಟ್ಟಿಕೊಂಡು ಹೊಡಾಡಿದರು. ಇದು ಜನರಲ್ಲಿ ವಿನೋದ ಹುಟ್ಟಿಸಿ ನೋಡಲು ಭಾರಿ ಗುಂಪು ಶೇಖರಿಸಿತು ಇವನ್ನು ಚದುರಿಸಲು ಪೋಲಿಸರು ಗುಂಡು ಹಾರಿಸಿದರು ಯಾರಿಗೂ ಗಾಯವಾಗಿಲ್ಲವಂತೆ ಕರಾಚಿಯಲ್ಲಿ ಗುಂಡು ಹಾರಿಸಿದ ಫಲವಾಗಿ 14 ಮಂದಿಗೆ ಗಾಯವಾಗಿದೆ. ಮುಷ್ಕರವು ಕಲ್ಕತ್ತಾ ಮದರಾಸುಗಳಿಗೆ ಹರಡಿದೆ.

ಬ್ರಿಟಿಷ್ ಪಾರ್ಲಿಮೆಂಟರಿ ರಾಯಭಾರ ವರ್ಗ

ಬ್ರಿಟಿಷರ ರಾಜನೀತಿಯು ಅನುಪಮವಾದದ್ದು. ವಸ್ತುತಃ ರಾಜನೀತಿಯಲ್ಲಿಯ ನೀತಿಯು ತುಪ್ಪದ ಹೀರೇಕಾಯಿಯಲ್ಲಿಯು ತುಪ್ಪದಂತೆ ಎಂದು ಹೇಳಿದಲ್ಲಿ ಸರಿಹೋಗುವುದು.

ಸುಮಾರು 130 ವರ್ಷಗಳ ಹಿಂದೆಯೇ ಭಾರತ ದೇಶಕ್ಕೆ ಸ್ವಾತಂತ್ರ್ಯ ಪ್ರದಾನ ನಾಟಕಕ್ಕೆ ನಾಂದಿಯು ನಡೆಯಿತೆನ್ನಬಹುದು. ಆಗಿನಿಂದ ನಮಗೆ ಟೆಪಾಲು ಮೂಲಕ ಸ್ವರಾಜ್ಯವನ್ನು ಕಳುಹಿಸುತ್ತಿರುವಂತೆ ತೋರಿಸಿಕೊಳ್ಳಲು ಬ್ರಿಟಿಷ್ ಸರಕಾರವು ಮಾಂಟೇಗ್—ಚಮ್ಸ್‌ಫರ್ಡ್ ಸಂಸ್ಕರಣಗಳನ್ನೂ, ಸೈಮನ್ ಕಮಿಷನ್‌ಗಳನ್ನೂ, ರೌಂಡ್ ಟೇಬಲ್ ಕಾನ್ಫರೆನ್ಸುಗಳನ್ನೂ, ಹೊಸ ಇಂಡಿಯಾ ಕಾನೂನುಗಳನ್ನೂ, ಕ್ರಿಪ್ಸ್ ರಾಯಭಾರಗಳನ್ನೂ, ಸಿಮ್ಲಾ ಸಭೆಗಳನ್ನೂ ನಮ್ಮ ಕಣ್ಣುಗಳೆದುರಿಗೆ ಪ್ರದರ್ಶಿಸುತ್ತಿರುವರು ನಟರು ಸಮರ್ಥರಾದಲ್ಲಿ ನಾಟಕವು ಯಥಾರ್ಥವಾಗಿ ಕಾಣಬರುವಂತೆ, ಆಯಾ ಪ್ರದರ್ಶನಗಳಿಗಾಗಿ ಬ್ರಿಟಿಷ್ ಸರಕಾರದವರು ಉಪಯೋಗಿಸುವಂಥವರು ಸಮರ್ಥರಾದುದರಿಂದ ಆಗಿಂದಾಗ್ಗೆ ಅಂಗ್ಲೆಯಲ್ಲಿ ವೈಕುಂಠವನ್ನು ನೋಡಿಸಿದಂತೆ ನಟಿಸುತ್ತಾ ಭಾರತೀಯರಲ್ಲಿ ನಂಬಿಕೆ ಹುಟ್ಟಿಸುತ್ತಿರುವರು.

ಈ ನಾಟಕದ ಒಂದು ಅಂಗವೇ ಈಗಿನ ರಾಯಭಾರ ವರ್ಗ. ಭಾರತ ದೇಶದ ಪರಿಸ್ಥಿತಿಯನ್ನು ಪರಿಚಯ ಮಾಡಿಕೊಂಡು ಭಾರತೀಯರ ಸ್ವರಾಜ್ಯಾರ್ಹತೆಯನ್ನು ಕುರಿತು ವಿಚಾರಿಸಿ ತಿಳಿಯಪಡಿಸುವುದೇ ಇವರ ಕೆಲಸ. ಈ ಕಾರ್ಯವನ್ನು ಅನುಭವ ಎಷ್ಟೋ ಚಾಕಚಕ್ಯತೆಯೊಂದಿಗೆ ನಿರ್ವಹಿಸುತ್ತಿರುವಂತೆ ಸಮಾಚಾರಗಳಿಂದ ತಿಳಿಯಬರುತ್ತಿದೆ.

ಕಾಂಗ್ರೆಸ್ ನಾಯಕರೊಂದಿಗೆ ಸಂಭಾಷಣೆ ಮಾಡುವಾಗ ಭಾರತ ದೇಶಕ್ಕೆ ಪರಿಪೂರ್ಣ ಸ್ವಾತಂತ್ರ್ಯವೇ ಅವಶ್ಯಕವೆಂದೂ, ಜಿನ್ನಾರೊಡನೆ ಮಾತನಾಡುವಾಗ ಪಾಕಿಸ್ತಾನದ ವಾದವು ಬಲತ್ಕರವಾದದ್ದೆಂದೂ ಗಾಂಧಿಯೊಂದಿಗೆ ಸಂಭಾಷಣೆ ಮಾಡಿದಾಗ ಪಾಕಿಸ್ತಾನದ ವಾದವು ಬಲತ್ಕರವಾದುದೇ ಎಂದೂ ಗಾಂಧಿಯೊಂದಿಗೆ ಸಂಭಾಷಣೆ ಮಾಡುವಾಗ ಇವರು ಬುದ್ಧಿವಂತರೆಂದೂ, ಈ ಬಗೆಯಲ್ಲಿ ಎಲ್ಲೆಲ್ಲಿಗೆ ಯಾವ ಮಾತನಾಡಬೇಕೋ ಹಾಗೆ ಮಾತನಾಡುತ್ತಾ 'ಭಾರತ ದೇಶವು ಬಹಳ ದೊಡ್ಡದು' ಎಂದು ಜನರನ್ನು ಹರ್ಷಗೊಳಿಸುತ್ತಾ ಇರುವ ಈ ರಾಯಭಾರವು ನಮ್ಮ ದೇಶಕ್ಕೆ ಒಂದಿಷ್ಟಾಗಿದ ಕೂಡಲೇನನು ಹೇಳ

ವುದೋ ತೀರಿಯದು. ಬ್ರಿಟಿಷು ಪ್ರಮು ಖರಲ್ಲಿ ಒಪಳ ಮಂದಿ ಭಾರತದೇಶದಲ್ಲಿ ರವಸರೆಗೂ ನಮ್ಮನ್ನು ಹೊಗಳ್ತಿದ್ದ ತೂ, ಹಡಗು ಹತ್ತುತ್ತಲೇ ಬೇರೆ ಬಗೆ ಯಲ್ಲಿ ಸುಳ್ಳಿಸುಳ್ಳಿಸಿಂದ ಕೂಡಿದ ವು ನ್ಯಕವನ್ನು ಒರೆಯುವಂಥವರೆಂಬುದನ್ನು ಮರೆಯಕೂಡದು. ಆದ-ದರಿಂದ ಈ ರಾಯಭಾರದವರ ವಿಚಾರ ದಲ್ಲಿಯೂ ಮುಂದೆ ನೋಡಬೇಕಾಗಿದೆ.

ಒಂದುವೇಳೆ ಈ ಸಭ್ಯರು ಭಾರತ ದೇಶವು ಸ್ವರಾಜ್ಯವನ್ನು ಪಡೆಯಲು ಅರ್ಹತೆಯುಳ್ಳದ್ದಾಗಿದೆ ಯೆಂದು ತಮ್ಮ ತೀರ್ಮಾನವನ್ನು ತಿಳಿಸಿದರೂ ಇವರು ಪಾರ್ಲಿಮೆಂಟರೀ ವರ್ಗದವರೇ ಹೊರತು ಸರಕಾರಕ್ಕೆ ಸಂಬಂಧಿಸಿದವರಲ್ಲವಾದುದ ರಿಂದ ಇವರ ಸಲಹೆಗಳನ್ನು ಬ್ರಿಟಿಷ್ ಸರಕಾರವು ಒಪ್ಪಿ ಆಚರಣೆಗೆ ತರುವು ದೆಂಬ ಆಶೆಯಿರುವುದಿಲ್ಲ.

ಆದುದರಿಂದ ಹೇಗಾದರೂ ಸ್ವಲ್ಪ ಕಾಲಯಾಪನೆ ಮಾಡಲೂ ಆ ತೆರುವಾಯ ಸ್ವರಾಜ್ಯವನ್ನು ಕೊಡುವ ವಿಷಯ. ದಲ್ಲಿ ವಾಯಿದೆ ಹಾಕಲೂ ಈ ಪಾರ್ಲಿ ಮೆಂಟರೀ ರಾಯಭಾರ ವರ್ಗದವರನ್ನು ಕಳುಹಿಸುವಿಕೆಯಲ್ಲಿ ಬ್ರಿಟಿಷರ ರಾಜನೀ ತಿಯ ಉದ್ದೇಶವಾಗಿದೆ ಎಂದು ಹಲವರು ವಿಜ್ಞಾಪಿಸಿಗಳು ಅಭಿಪ್ರಾಯ ಪಟ್ಟಿರು ವರು. ಆದರೆ ಭಾರತವನ್ನು ಒಹಳ ಕಾಲ ದವರೆಗೂ ಗುಲಾಮ ದೇಶವಾಗಿ ಇರ ಲಾರದೆಂದೂ ಆದ-ದರಿಂದ ಬ್ರಿಟಿಷ್ ತನ್ನ ಹೊಟ್ಟೆಯ ಪಾಡಿಗಾಗಿ ನಮ್ಮ ದೇಶವ ನ್ನು ಅಧ್ಯಾವಾಗಿ ಬಿಡಿಸುವದು ಕ್ಷೇಮ ಕರವಲ್ಲವೆಂದೂ ಗ್ರಹಿಸಬೇಕಾಗಿದೆ.

(ದಿ. ವಾ)

ಕಾಂಗ್ರೆಸ್ ಪಕ್ಷದ ಶ್ರೀ ಅನಂತಶ ಯನಂ ಅಯಂಗಾರ್ಯರು ಸ್ವಾತಂತ್ರ್ಯ ಘೋಷಣೆ ಕರಡು ಅಗಬೇಕೆಂದು ಬ್ರಿಟಿ ಷ್ ಮಂತ್ರಿ ಮಂಡಲ ನಿಯೋಗ ಒಗ್ಗೆ ಸಂತೋಷ ವ್ಯಕ್ತಪಡಿಸಿ ಕೇಂದ್ರ ಸಭೆ ಯಲ್ಲಿ ನುಡಿದರು.

At Ranjit

2 nd Week

TAQDEER

ತಕದೀರ್

ನಾಗಿರ್‌ವಾಸ್, ಮೋತಿಲಾಲ್, ಚಾರ್ಲಿ

ಹಸಕ್ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

At Opera —

3 ನೇ ವಾರ

ಪರಂಜ್ಯೋತಿ

ವಿ. ಎ. ಚೆಲ್ಲಪ್ಪ ಸಿ. ಪಿ. ರಾಜಲಕ್ಷ್ಮಿ
ಬಾಲ ಸುಬ್ರಹ್ಮಣ್ಯಂ ಒಯಗೌರಿ
ಕೃಷ್ಣ ಮಧುರಂ ಪಾತ್ರದಾರರು
ಮುಂದಿನ ವಿನೋದ
ಸುರೇಂದ್ರ, ಮೇಹತಾಬ್
ಪಾತ್ರವಹಿಸಿರುವ
ವಿಶ್ವಾಸ್

ಕಾಲೀನಮೆಂಟರಿ ರಾಯಭಾರದೊಡನೆ ರಾಜಗೋಪಾಚಾರಿ

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ರಕ್ತವರ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಶಕ್ತಿಸುಧಾ

— ಬೆಲೆ ಡಬ್ಬಿ ೧ ಕ್ಕೆ ರೂ. ೧.೪-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore.

For Good Printing
L. N. Press
Sriramp st MYSORE